ಗುದ್ದುಗಳು ಬೀಳುವವು. ಆದರೆ ಅದು ಏನೇ ಆದರೂ ಯಾವುದೂ ಬದಲಾಗದೆ ಕಡೆಗೆ ಅಮ್ಮ ಸುಮ್ಮನಾದಳು. ಅಪ್ಪ ಟೀ ಎಸ್ಟೇಟಿನ ಮೇಸ್ತ್ರಿಯಾಗಿದ್ದ, ಅಮ್ಮ ಎಲ್ಲ ಕೂಲಿಯಾಳುಗಳಂತೆ ಕೆಲಸಕ್ಕೆ ಹೋಗುತ್ತಿದ್ದಳು. ಕೆಲಸಕ್ಕೆ ಬರುವ ಆಳಿನ ಮೇಲೆ ಅಕ್ಕಿ ಅಳೆದು ಕೊಡುತ್ತಿದ್ದದು ಒಂದು ಕಾರಣವಾದರೆ ನನ್ನನ್ನೂ ತಂಗಿಯನ್ನೂ ಶತಾಯಗತಾಯ ಟೀ ಎಸ್ಟೇಟಿನ ಪರಂಪರಾಗತ ಕೆಲಸದಾಳಿನ ನಂಟಿನಿಂದ ಹೊರತರಬೇಕು, ಒಳ್ಳೆ ಸ್ಕೂಲಿನಲ್ಲಿ ಓದಿಸಬೇಕು, ಅದಕ್ಕಾಗಿ ಹೆಚ್ಚು ಹಣ ಬೇಕು, ಅದಕ್ಕೆ ಕೆಲಸಕ್ಕೆ ಹೋಗಿಯೇ ತೀರಬೇಕು ಎನ್ನುವುದೂ ಆಗಿತ್ತು. ಇನ್ನು ಬಾಪುಟ್ಟಿಯ ಉಮ್ಮನಿಗೆ ಅದೇನು ಆಸೆಯಿತ್ತೋ ಏನೋ. ಅಂತೂ ನಮ್ಮ ಕೂಲಿಯಾಳು ಮಕ್ಕಳಲ್ಲಿ ಮೊದಲಿಗನಾಗಿ ಎಸ್ಟೇಟಿನಿಂದ ಹೊರಬಿದ್ದವನು ಬಾಪುಟ್ಟಿಯಾಗಿದ್ದ. ಬಾಪುಟ್ಟಿ ನನಗಿಂತ ಐದು ವರ್ಷಕೆ ದೊಡ್ಡವನಿದ್ದ. ಆದರೆ ಅವನು ನನಗಿಂತಲೂ ತೆಳ್ಳಗೆ, ಪೀಚುಪೀಚಗೆ, ಕುಳ್ಳಗೆ ಇದ್ದ. ಅದು ಕೂಡ ಒಂದು ರೀತಿಯಲ್ಲಿ ಅಲ್ಲಿಂದ ಹೊರಬೀಳಲು ಅವನಿಗೆ ಸಹಾಯ ಮಾಡಿತ್ತೆನ್ನಬೇಕು. ಅಂಥ ಅವನು ಪೇಟೆಗೆ ಹೋಗಿ ಮೀನು ತಂದು ಮಾರಾಟಕ್ಕೆ ಇಳಿದಾಗ ಮಾತ್ರ ಎಲ್ಲರೂ ಆಶ್ಚರ್ಯ ಪಟ್ಟಿದ್ದರು. ಇಬ್ಬರ ಹೊರತು. ಒಂದು ನಾನು, ಇನ್ನೊಂದು ಅಮ್ಮ. ಇಬ್ಬರಿಗೂ ಗೊತ್ತಿತ್ತು. ಈ ವ್ಯವಸ್ಥೆ ಮಾಡಿದವನು ಅಪ್ಪ. ಬಾಪುಟ್ಟಿಗೆ ಮೀನು ಮಾರಲೆಂದೇ ಟಿವಿಎಸ್ ಗಾಡಿಯೊಂದನ್ನು ಕೊಡಿಸಿ, ಅದಕೆ ಪೇಂ ಪೇಂ ಎಂದು ಜೋರಾಗಿ ಸದ್ದು ಮಾಡುವ ಹಾರ್ನ್ ಅಳವಡಿಸಿ ಕೊಟ್ಟಿದ್ದ ಅಪ್ಪ. "ಅಂತೂ ಇಟ್ಟುಕೊಂಡವಳ ಮಗನಿಗೆ ಇಷ್ಟೆಲ್ಲ ಮಾಡುತ್ತಿರುವವನು ನಾಳೆ ನಿನಗೂ ಏನಾದರೂ ಮಾಡಬಹುದು ಅಂದುಕೊಂಡು ಈ ದುಃಖ ನುಂಗುತಿದೀನಿ. ಅವನು ಹಾರ್ನ್ ಹೊಡೆದುಕೊಂಡು ಬಂದರೆ ನಂಗೆ ಎದೆಯೊಳಗೆ ಇರಿಯುವ ಹಾಗಾಗುತ್ತೆ" ಅಂದಿದ್ದಳು ಅಮ್ಮ. ಅದನ್ನು ಮೌನವಾಗಿ ಕೇಳಿಸಿಕೊಂಡು ಹೊರಬಂದ ನಾನು ಮುಂದಿನ ಕ್ಷಣದಲ್ಲಿ ಬಾಪುಟ್ಟಿಯ ಮನೆಯಲ್ಲಿದ್ದೆ. ಬಾಪುಟ್ಟಿ ಟೀ ಎಸ್ಟೇಟಿನ ಜೀತಕ್ಕೆ ನಿಲ್ಲದೆ ತನ್ನದು ಅಂತ ಸ್ವಂತಕೆ ಒಂದು ಕೆಲಸ ಹಿಡಿದಿದ್ದು ನನಗಂತೂ ತುಂಬ ಸಂತೋಷವಾಗಿತ್ತು. ಅವನ ಹಸಿರು ಬಣ್ಣದ ಟಿವಿಎಸ್ ಗಾಡಿಗೆ ಕೇಸರಿ ಬಣ್ಣದ ಟಬ್ ಕಟ್ಟಿದ್ದ. ಅದರೊಳಗೆ ಬಿಳೀ ಹೊಟ್ಟೆ ಮೇಲೆ ಮಾಡಿಕೊಂಡು ಹೊಳೆಯುತ್ತ ಮಲಗಿದ್ದ ಮತ್ತಿ, ಐಲೆ ಮೀನುಗಳನ್ನು ನೋಡಿ ಕೇಸರಿ ಬಿಳಿ ಹಸಿರು ಇದು ನಮ್ಮ ಬಾವುಟಾ ಎಂದು ರಾಗವಾಗಿ ಹಾಡಿದ್ದು ಇವತ್ತೇನೋ ಅನ್ನುವಂತೆ ನೆನಪಿದೆ. ಆದರೆ ಆ ಹೊತ್ತಿನಲ್ಲಿ ತನ್ನ ಬೈಕಿನ ಹ್ಯಾಂಡಲ್ಲನ್ನು ಸುಮ್ಮನೆ ತಿರುಗಿಸುತ್ತ, ಕಣ್ಣಿನಲ್ಲಿ ಒಂದು ಕೃತಜ್ಞತೆಯನ್ನೂ, ಸಂತೋಷವನ್ನೂ ನೆಮ್ಮದಿಯನ್ನೂ ಮೇಳೈಸಿಕೊಂಡಂಥ ಒಂದು ಸುಖೀಭಾವವನ್ನು ಹೊತ್ತು ನಿಂತಿದ್ದ ಬಾಪುಟ್ಟಿ ಮುಂದೊಂದು ದಿನ ತನ್ನ ಅವೇ ಕೈಗಳನು ಕಳೆದುಕೊಳ್ಳುತ್ತಾನೆಂದು ಯಾರು ತಾನೇ ಬಗೆದಿದ್ದರು. 'ಹಾಳಾದವನು, ಹಾಗೆ ಹಾರ್ನ್ ಹೊಡೆವ ಅವನ ಕೈಗಳು ತುಂಡಾಗಬೇಕು' ಎಂದು ಸಣ್ಣ ದನಿಯಲ್ಲಿ ಶಾಪ ಹಾಕುತ್ತ ಹಲ್ಲು ಕಡಿಯುತ್ತಿದ್ದ ಅಮ್ಮ ಕೂಡ ಯಾವತ್ತಿಗೂ ನಿಜದಲ್ಲಿ, ಅವಳ ಅಂತರಾಳದಲ್ಲಿ, ಅವಳ ಕರುಳಿನಲ್ಲಿ ಹೀಗಾಗಲೆಂದು ಬಯಸಿದ್ದಿರಲಿಕ್ಕಿಲ್ಲ. ಆದರೆ ಹಾಗೆ ನಡೆದಿದ್ದು ಬಾಪುಟ್ಟಿಯ ಬದುಕಿನ ದುರಂತ.

ಇದಕ್ಕೆಲ್ಲ ಕಾರಣ– ಉಹೂಂ, ನಾನು ಇದರಲ್ಲಿ ಯಾರನ್ನೂ ಕಾರಣವಾಗಿಸಿ ಮಾತಾಡಲು ಹೋಗಲಾರೆ. ನಮ್ಮ ಊರಿನಲ್ಲೊಂದು ಹೋಟೆಲಿತ್ತು. ಅದು ಕೇವಲ ಮರದ ತಡಿಗಳನ್ನು ಇಟ್ಟು, ತೆಂಗಿನಸೋಗೆ ಹೊದೆಸಿದ ಒಂದು ಪುಟ್ಟ ಹೋಟೆಲು. ಅದನ್ನು ಹೋಟೆಲ್ ಅನ್ನಬಾರದೋ ಏನೋ. ಆದರೆ ಅದನ್ನು ಹಾಗನ್ನದೆ ವಿಧಿಯಿಲ್ಲ. ಯಾಕೆಂದರೆ ನಮ್ಮೂರಿಗೆ ಇದ್ದ ಒಂದೇ ಹೋಟೆಲು ಅದೇ ಆಗಿತ್ತು. ಮನೆಯ ಹೊರಗೆ ಯಾರಾದರೂ ಟೀ, ಕಡಿ, ಕುತ್ತಿಪುಟ್ಟು ಪರೊಟಾ, ಕಡಲಕರಿ, ಮುಟ್ಟ ಕರಿ ತಿನ್ನಬೇಕಿದ್ದರೆ ಅದು ಕಡ್ಡಾಯವಾಗಿ ನಾಯರ್ ಹೋಟೆಲಿನಲ್ಲೇ ಆಗಬೇಕಿತ್ತು. ಅದು